ಸಾಕ್ಷಿಯನ್ನು ದಿಃ-03.03.2020 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

<u>ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಿಂದ ಃ-</u>

**1.** ನಾನು 7ನೇ ತರಗತಿಯವರೆಗೆ ಓದಿರುತ್ತೇನೆ. ಕನ್ನಡ ಹಾಗೂ ಇಂಗ್ಲೀಷ್ ಭಾಷೆ ಸುಮಾರು ಅರ್ಥ ಆಗುತ್ತದೆ. ದಾವಾ ಆಸ್ತಿಯು 0.03 ಗುಂಟೆ ಆಗಿದ್ದು ಸದರಿ ಆಸ್ತಿಯನ್ನು ಕೆ.ಎಸ್.ವೀರರಾಘವನ್ ಅವರಿಂದ ಕೊಂಡುಕೊಂಡಿರುತ್ತೇನೆ. ಸದರಿ ಆಸ್ತಿಯು ಸರ್ವೆ ನಂಬರ್ ಆಗಿರುತ್ತದೆ. ಸದರಿ ದಾವಾ ಆಸ್ತಿಯು ಚೆಕ್ಕುಬಂದಿ ನನಗೆ ಗೊತ್ತು ಪೂರ್ವಕ್ಕೆ: ಗಂಗಮ್ಮರವರ ಮನೆ, ಪಶ್ಚಿಮಕ್ಕೆ: ಗೌರಮ್ಮರವರ ಖಾಲಿ ನಿವೇಶನ, ಉತ್ತರಕ್ಕೆ: ಶೆಟ್ಟಿಹಳ್ಳಿ ಬೀದಿ, ಮತ್ತು ದಕ್ಷಿಣಕ್ಕೆ: ಕೃಷ್ಣಶೆಟ್ಟಿರವರ ಮನೆ. ನಾನು ವೀರರಾಘವನ್ ರವರಿಂದ ಕೊಂಡುಕೊಂಡಿರುವ ಆಸ್ತಿ ಕೃಷ್ಣಶೆಟ್ಟಿರವರಿಗೆ ಆಸ್ತಿ 0.03 ಗುಂಟೆ ಒಳಗೆ ಸೇರಿ ಕೊಂಡಿರುತ್ತದೆ. 50*33 ಅಡಿ ಮನೆಯನ್ನು ದಾವಾ ಆಸ್ತಿಯ ದಕ್ಷಿಣದಲ್ಲಿ ಕೃಷ್ಣಶೆಟ್ಟಿರವರಿಗೆ ಮಾರಾಟ ಮಾಡಿರುತ್ತೇನೆ.

**2.** ದಿನಾಂಕ 10-12-2012 ರಂದು ಸದರಿ ಮನೆಯನ್ನು ಕೃಷ್ಣಶೆಟ್ಟಿರವರಿಗೆ ಮಾರಾಟ ಮಾಡಿರುತ್ತೇನೆ. ಪೂರ್ವ-ಪಶ್ಚಿಮ: 25, ಉತ್ತರ-ದಕ್ಷಿಣ:35 ಗಳಲ್ಲಿ ಮನೆ ಕಟ್ಟಿರುತ್ತೇನೆ. ಬಿಲ್ಡಿಂಗ್ ಪೂರ್ವಕ್ಕೆ 7 ಅಡಿ ಜಾಗ ಬಿಟ್ಟಿರುತ್ತೇನೆ, ಪಶ್ಚಿಮಕ್ಕೆ 2, 2.½ ಅಡಿ ಬಿಟ್ಟಿರುತ್ತೇನೆ. ಎ.ಸಿ ಶೀಟಿನ ಮನೆಯನ್ನು ಪೂರ್ವ-ಪಶ್ಚಿಮ: 33 ಅಡಿ ಹಾಗೂ ಉತ್ತರ-ದಕ್ಷಿಣ: 18 ಅಡಿ ಕಟ್ಟಿರುತ್ತೇನೆ. ಅಲಿನೇಷನ್ ಮಾಡಿದ ನಂತರ 3 ಗುಂಟೆ ಜಮೀನಿನ ಅಳತೆ ಪೂರ್ವ-ಪಶ್ಚಿಮ: 33 ಅಡಿ ಹಾಗೂ ಉತ್ತರ: ದಕ್ಷಿಣ: 99 ಅಡಿ ಆಗಿರುತ್ತದೆ. ಮೂರು ಗುಂಟೆ ಜಮೀನನ್ನು ಅಡಿಯಲ್ಲಿ 3267 ಚದರ ಅಡಿ ಬರುತ್ತದೆ. ನಿ.ಪಿ-1 ರಲ್ಲಿ ಹೇಳಿರುವಂತೆ ದಕ್ಷಿಣ ದಿಕ್ಕಿನ ರಸ್ತೆಯಿಂದ ಉತ್ತರದ ದಿಕ್ಕಿನ ರಸ್ತೆಯವರೆಗೆ 90 ಅಡಿ ಬರುತ್ತದೆ. ಸದರಿ ದಕ್ಷಿಣ ದಿಕ್ಕಿನ ರಸ್ತೆಯಿಂದ ಉತ್ತರ ದಿಕ್ಕಿನ ರಸ್ತೆಯವರೆಗೆ 115 ಅಡಿ ಇದೆ ಎಂದರೆ ಸಾಕ್ಷಿಯು ಮುಂದುವರೆದು ಇರಬಹುದು ಪ್ರತಿವಾದಿಗಳು ಅಳತೆ ಮಾಡಿಸಬಹುದು ಎನ್ನುತ್ತಾರೆ. ಮೂರು ಗುಂಟೆ ಜಾಗದಲ್ಲಿ ಪೂರ್ವ: ಪಶ್ಚಿಮ: 40 ಅಡಿ ಉತ್ತರ-ದಕ್ಷಿಣ: 90 ಅಡಿ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**3.** ಸಾಕ್ಷಿಗೆ ಈಗ ಪ್ರಮಾಣ ಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಪ್ರಮಾಣ ಪತ್ರವನ್ನು ವೀರರಾಘವರವರು ನನಗೆ

ಮಾಡಿಕೊಟ್ಟಿರುವ ಪ್ರಮಾಣ ಪತ್ರ ಆಗಿರುತ್ತದೆ. ಸದರಿ ಮೂಲ ಪ್ರತಿಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಪೂರ್ವ-ಪಶ್ಚಿಮ: 40 ಅಡಿ ಉತ್ತರ-ದಕ್ಷಿಣ: 90 ಅಡಿ ನಮೂದು ಮಾಡಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರ ದಿಂದ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

(ಐಶ್ವರ್ಯ ಚಿದಾನಂದ ಪಟ್ಟಣಶೆಟ್ಟಿ)
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ಸಿ
ಮಳವಳ್ಳಿ